ಚಾಟಿ ನಿಂಗ, ಅಂತಹ ಸಂದರ್ಭಗಳಲ್ಲೆಲ್ಲಾ ಸಂತೆಯೊಳಗೆ ಮನೆಮಾಡಿದ ಸಂತನಂತೆ ನಿಶ್ಚಲನಾಗಿ ಧ್ಯಾನಾಸಕ್ತನಾಗುತ್ತ ನಿದ್ರಾಪರವಶನಾಗಿಬಿಡುತ್ತಿದ್ದ. ಈಗಲಾದರೋ ಚಾಟಿನಿಂಗನಿಗೆ ಅದೇಕೋ ಅಸಾಧ್ಯವಾದ ತಳಮಳ ಹುಟ್ಟತೊಡಗಿತು. ಸುಮಾರು ಅಷ್ಟೇ ಕಾಲದಿಂದ ಈ ಜೋಯಿಸರ ರಾಮಣ್ಣ ಮದುವೆ, ಶನಿಕತೆಗಳಲ್ಲಿ ಬಳಸೀ ಬಳಸೀ ಹಸಗೆಟ್ಟು ಹೋಗಿದ್ದ ಮಾತುಗಳಿಂದಲೇ ಅರ್ಧಗಂಟೆಯಿಂದ ಬೈಸಿಕೊಂಡ ಚಾಟಿನಿಂಗನಿಗೆ ಇನ್ನು ತಡೆಯಲಾರದೆ ನಖಶಿಖಾಂತ ಉರಿಯೆದ್ದಿತು. ತನ್ನ ಬತ್ತಳಿಕೆಯಿಂದ ಹೇಮಾಹೇಮಿ ಅಸ್ತ್ರಗಳಾದ 'ನೀನ್ಯಾರೋ ಗೊತ್ತಿಲ್ಲ ಹೋಗಲೇ', 'ನೀನೇನೂ ಕೊಟ್ಟೇ ಇಲ್ಲ ಅಂದ್ರೇ ಅದೇನ್ ಕಿತ್ಗತಿಯೋ', 'ನಿನಿಗ್ ಕೊಡೋದು ಏನೂ ಇಲ್ಲ ಅದೇನ್ ಅರ್ಕತಿಯೋ, ಅರ್ಕಾ ಹೋಗು', ಮುಂತಾದ ಅಸ್ತ್ರಗಳನ್ನು ಹೊರತೆಗೆದರೂ ಈ ಹಾರುವಯ್ಯನ ಮೇಲೆ ಪ್ರಯೋಗಿಸಲು ಮನಸ್ಸು ಬಾರದೆ ಭೀಷ್ಮದ್ರೋಣಾದಿಗಳನ್ನು ರಣಾಂಗಣದಲ್ಲಿ ಎದುರಾದಂಥ ಅರ್ಜುನನಂತಾದನು.

ಇಷ್ಟೆಲ್ಲಾ ಹೇಳಿದರೂ ಇವರಿಬ್ಬರ ಜಗಳಕ್ಕೆ ಕಾರಣವನ್ನು ಇನ್ನೂ ಹೇಳಿಲ್ಲ. ಯಾಕೆಂದರೆ ಜಗಳದ ಕಾರಣಕ್ಕೆ ಅಂತಹ ಮಹತ್ವ ಏನೂ ಇಲ್ಲ. ಅದೂ ಅಲ್ಲದೆ ಚಾಟಿನಿಂಗನ ಜೊತೆ ಯಾರೇ ಯಾವುದೇ ವ್ಯವಹಾರ ಮಾಡಿದರೂ ಅದು ಪರ್ಯವಸಾನವಾಗುತ್ತಿದ್ದುದು ಜಗಳದಲ್ಲಿಯೇ. ಅವನು ಯಾರ ಗಂಟನ್ನೂ ತಿನ್ನದೆ ಬಿಟ್ಟವನಲ್ಲ. ಅದು ಅವನ ಉದ್ಯೋಗದ ಭಾಗವೇ ಆಗಿದ್ದುದರಿಂದ, ವಿಶೇಷ ಸಂಗತಿಯೇನೂ ಆಗಿರಲಿಲ್ಲ. ಈ ಜೋಯಿಸರದ್ದೂ ಅಷ್ಟೆ. ದಾನಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ಮತ್ತು ಸಕಲ ಪಾಪಪರಿಹಾರಾರ್ಥವಾಗಿ ನೀಡಿದ ಗೋದಾನವನ್ನು ಪಡೆದವರಾದಂಥಾ ರಾಮಾಜೋಯಿಸರು, ಅಂಥಾ ಗೋದಾನವು ಅತ್ಯಂತ ಕುಲ್ಪಾದ ಹಸುವಾದಾಗ್ಯೂ ಅದರಿಂದ ಪಡೆಯಬಹುದಾದ ಹಾಲು, ಮೊಸರಿನ ಆಸೆಗೆ ಕಾದು ಕಟ್ಟಿ, ಅದರಿಂದ ಹುಟ್ಟಿದ ಇನ್ನೂ ಗಿಡ್ಡ ಕರು ಐದಾರು ವರುಷಗಳಾದರೂ ಫಲವಾಗದೇ ಇದ್ದುದಕ್ಕೆ, ಅದನ್ನು ಯಾವ ಪುಣ್ಯಾತ್ಮನಿಗಾದರೂ ಬೇಸಾಯಕ್ಕೆ ಅನುಕೂಲವಾದೀತು ಮಾರಿಸಿಬಿಡು ಎಂದು ಚಾಟಿನಿಂಗನ ಹತ್ತಿರ ಬಿಟ್ಟರು. ಅವನಾದರೋ ಕ್ಷಣಾರ್ಧದಲ್ಲಿ ಸಾಬರಿಗೆ ಮಾರಿ, ಸಾಬರ ಲಾರಿ ಊರು ಬಿಡುವುದರೊಳಗೇ ಬಂದ ಕಾಸನ್ನು ಮಂಗಮಾಯ ಮಾಡಿಬಿಟ್ಟಿದ್ದನು. ಈ ಸುದ್ದಿ ರಾಮಾಜೋಯಿಸರಿಗೆ ತಲುಪಿ 'ಹರಿ ಹರೀ' ಎಂಬ ಉದ್ಗಾರವನ್ನು ಹುಟ್ಟಿಸಿತು. ರಾಮಾಜೋಯಿಸರ ಪಂಚಾಂಗದ ಪ್ರಕಾರ ಘೋರ ಪ್ರಮಾದವನ್ನು ಮಾಡಿದ ಚಾಟಿನಿಂಗನಿಂದ ಆ ಕರುವನ್ನು ಮಾರಿ ಬಂದ ಹಣವಸೂಲಿಗೆ ತೊಡಗಿದಾಕ್ಷಣವೇ ಚಾಟಿನಿಂಗನು ತನ್ನ ಮತ್ತು ಜೋಯಿಸರ ನಡುವಿನ ಸಮಸ್ತ ಸಂಬಂಧಗಳನ್ನು ತುಂಡರಿಸಿ ನಿರ್ಲಿಪ್ತನಾಗಿ ನಿಂತನು. ಸಾಲಗಾರನ ಮತ್ತು ಸಾಲ ಕೊಟ್ಟವನ ನಡುವಿನ ಸಂಬಂಧವನ್ನು ಸ್ಥಾಪಿಸಲು ಜೋಯಿಸರೂ ಇಂಥಾ ಯಾವತ್ತೂ ಸಂಬಂಧಗಳನ್ನು ತುಂಡರಿಸಲು ಸಕಲ ಭೇದೋಪಾಯಗಳೊಡನೆ ಚಾಟಿನಿಂಗನೂ ಶ್ರಮಿಸುತ್ತಿರಲಾಗಿ:

ಇದಿಷ್ಟು ಘಟನೆಗೆ ಸಾಕ್ಷಿಯಾಗಿರುವ ನಾನು ಮತ್ತು ನಿಮ್ಮಗಳ ಜೊತೆಗೆ ಇನ್ನೆರಡರು ಮೂಕಸಾಕ್ಷಿಗಳೂ ಇದ್ದವು. ಹೇಳಿಕೇಳಿ ಅವು ಮೂಕಸಾಕ್ಷಿಗಳಾದ್ದರಿಂದ, ಅವುಗಳ ವಿಷಯ ಈ ನಡುವೆಯೇ ಬರಲಿಲ್ಲ. ಇನ್ನು ಅವು ರಂಗಕ್ಕೆ ಬರುವುದರಿಂದ ಅವುಗಳನ್ನು 'ನೀವುದಾರೆಂದು' ಕೇಳುತ್ತಾ ಕರೆತರುತ್ತಿದ್ದೇನೆ.

ಮೊದಲನೆಯದಾಗಿ ಚಾಟಿ ನಿಂಗನ ಹೆಂಡತಿ ಸಿದ್ರಾಮಕ್ಕ. ಈ ಹೆಂಡತಿ ಎನ್ನುವ ಪದ ಸಿದ್ರಾಮಕ್ಕ ಮತ್ತು ಚಾಟಿನಿಂಗನ ಸಂಬಂಧವನ್ನು ಸೂಚಿಸಲು ಏನೇನೂ ಸಾಲದು. ಚಾಟಿನಿಂಗನೊಡನೆ ಜಗಳವಾರಂಭಿಸಿದ ಯಾವನೇ ಗ್ರಾಸ್ತ ಬಾಯಿಮಾತಿನ ರಣಧೀರ ಕಂಠೀರವನಾದರೆ, ಸಿದ್ರಾಮಕ್ಕ ಅದು ಥರ್ಡ್‌ವರ್ಲ್ಡ್ ಕಂಟ್ರಿಗಳಿಗೆ ಸಂಬಂಧಿಸಿದ ಜಗಳದಂತೆ ತನಗೂ ಅದಕ್ಕೂ ಸಂಬಂಧವೇ ಇಲ್ಲದಂತೆ ತನ್ನ